XI ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ದರೋಡೆ ಕೋರರಿಂದುಂಟಾದ ಭಯಾನಕ ಪರಿಸ್ಥಿತಿ.

ಶ್ರೀ ವಿನಯಕುಮಾರ್ ಸೊರಕೆ.—ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ದರೋಡೆಕಾರರ ಕೃತ್ಯದಿಂದಾಗಿ ಜನರು ವಿಪರೀತವಾಗಿ ಆತಂಕಕ್ಕೆ ಒಳಗಾಗಿ ರಾತ್ರಿ ಹೊತ್ತಿನಲ್ಲಿ ನಿದ್ದೆಯಿಲ್ಲದೆ ಹೆದರಿಕೆಯಿಂದ ದರೋಡೆಕೋರರನ್ನು ಕಾಯುವಂಥ ಪರಿಸ್ಥಿತಿ ಬಂದಿರುತ್ತದೆ. ಪುತ್ತೂರು ತಾಲ್ಲೂಕಿಗೆ ಹೊಂದಿಕೊಂಡ ಒಂದು ಪಾದಂತಿಯ ಬಗ್ಗೆ ವಿಪರೀತ ಜನರು ಹೆದರಿಕೆಗೆ ಒಳಗಾಗಿ ಪೋಲಿಸ್ ಅಧಿಕಾರಿಗಳ್ಳಿಬ್ಬರು ದಿಯವರು ರಾತ್ರಿ ಹೊತ್ತಿನಲ್ಲಿ ತೀಪ್ರವಾಗಿ ಗಸ್ತು ತಿರುಗುವ ಪರಿಸ್ಥಿತಿ ಬಂದಿದೆ. ಪುತ್ತೂರು ತಾಲ್ಲೂಕಿಗೆ ಹೊಂದಿಕೊಂಡ ಪ್ರತಿ ಗ್ರಾಮದಲ್ಲೂ ಯುವಕರಿಂದ ಒಡಗೂಡಿದ ಗೃಹದಳಗಳನ್ನು ರಚಿಸಿದ್ದು ಪ್ರತಿ ಗ್ರಾಮದಲ್ಲಿಯೂ ದರೋಡೆಕೋರರನ್ನು ಕಾಯುವಂತಹ ಪರಿಸ್ಥಿತಿ ಬಂದಿದೆ. ರಾತ್ರಿ ಹೊತ್ತಿನಲ್ಲಿ ಹೆಂಗಸರು ಹೆದರಿಕೆಯಿಂದ ಬೇರೆ ಕಡೆಯಲ್ಲಿ ವಾಸ ಮಾಡುವ ಸಂದರ್ಭ ಬಂದಿದೆ. ಆದುದರಿಂದ ಇದಕ್ಕೆ ಸಂಬಂಧಪಟ್ಟ ಗೃಹಮಂತ್ರಿಗಳು ಹೆಚ್ಚಿಗೆ ಪ್ರಯತ್ನ ನಡೆಸಿದರೂ ಸಿಬ್ಬಂದಿಯು ಕೊರತೆ ವಾಹನ ಅಡಚಣೆ ಇವೆಲ್ಲಾ ಕಾರಣದಿಂದ ನಿರೀಕ್ಷೆ ಮಾಡುವಷ್ಟು ಜನರಲ್ಲಿ ಇರುವಂತಹ ಭಯಾನಕ ವಾತಾವರಣವನ್ನು ಹೋಗಲಾಡಿಸಲು ಆಗಿಲ್ಲ. ಆದುದರಿಂದ ಮಾನ್ಯ ಮಂತ್ರಿಗಳು ಇದರ ಬಗ್ಗೆ ತಕ್ಷಣ ಕ್ರಮ ತೆಗೆದುಕೊಳ್ಳಬೇಕಾಗಿ ತಮ್ಮ ಮೂಲಕ ಒತ್ತಾಯಪಡಿಸುತ್ತೇನೆ.

ಶ್ರೀ ಬಿ. ರಾಚಯ್ಯ. (ಗೃಹಮಂತ್ರಿಗಳು).—ಅಧ್ಯಕ್ಷರೇ, ನಾನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಲ್ಲೆಲ್ಲಿ ಡಕಾಯಿತರಿಂದ ಯಾವಾವ ಜನ ತೊಂದರೆಗೀಡಾಗಿದ್ದಾರೆ ಅವರ ಮನೆಗಳಿಗೇ ಹೋಗಿ ಭೇಟಿ ಕೊಟ್ಟಿದ್ದೇನೆ, ಸಾಂತ್ವನವನ್ನೂ ಮಾಡಿದ್ದೇನೆ ಮತ್ತು ದಕ್ಷಿಣ ಕನ್ನಡದ ಸೂಪರ್‌ಡೆಂಟ್, ಡಿ.ಐ.ಜಿ ಇವರುಗಳ ಸಹಾಯಕ್ಕೆ ಕೆಎಸ್‌ಆರ್‌ಟಿಸಿಯ ಸಹಕಾರದೊಂದಿಗೆ ರಿಸರ್ವ್ ಪೋಲಿಸರ ಸಹಾಯವನ್ನೂ ಕೊಟ್ಟು ಗಸ್ತು ತಿರುಗಲು ವ್ಯವಸ್ಥೆ ಮಾಡುವಂತೆ ಹೇಳಿ ಬಂದಿದ್ದೇನೆ. ಅಲ್ಲಿನ ಜನರೂ ತಪ್ಪೇ, ಉತ್ಸಾಹದಿಂದ ಪೋಲಿಸರಿಗೆ ಸಹಾಯ ಮಾಡುತ್ತಾ ಬಂದಿದ್ದಾರೆ. ಆದರೆ ಒಂದು ಕಡೆ ಮಾತ್ರ ಸ್ವಲ್ಪ ಉತ್ಸಾಹ ಜಾಸ್ತಿ ಆಯಿತೆನಿಸುತ್ತದೆ. ಏನೆಂದರೆ ಮೊನ್ನೆ ಮಂಥಾಯಿ ಎಂಬುವರ ಕಾರನ್ನು ನಿಲ್ಲಿಸಿ ಕೆಲವು ಗಸ್ತು ತಿರುಗುವ ಜನರೇ ಅವರಿಂದ ಕಾರಿನ ಕೀಲಿಯನ್ನು ಕಿತ್ತುಕೊಂಡು ಡಿಕ್ಕಿ ಬಾಕ್ಸಿನಲ್ಲಿದ್ದ ಹಣವನ್ನು ಕತ್ತರಿಸಿಕೊಂಡಂಥ ದುರ್ಘಟನೆ ನಡೆದಿದೆ. ಆದ್ದರಿಂದ ಹೀಗೆ ಗಸ್ತು ತಿರುಗಲು ಮುಂದೆ ಬರುವವರಲ್ಲಿ ಪೈಕಿ ವಿಶೇಷವಾದ ಆಸ್ತಿ ಉಳ್ಳವರನ್ನೂ, ಬ್ಯಾಡ್ ರೆಕಾರ್ಡ್ಸ್ ಇಲ್ಲದಿರುವವರನ್ನೇ ಆಯ್ಕೆ ಮಾಡಿಕೊಳ್ಳಲು ತಿಳಿಸಿದ್ದೇನೆ. ಇನ್ನು ಮುಂದೆ ಗಸ್ತಿ ತಿರುಗುವ ಜನ ರಾತ್ರಿ ವೇಳೆ ರಿಸರ್ವ್ ಪೋಲಿಸರನ್ನು ಉಪಯೋಗಿಸಿಕೊಂಡು ಕೆಲಸಮಾಡಬೇಕೆಂದು ಆದೇಶ ಕೊಟ್ಟಿದ್ದೇನೆ.

XII. ಬೆಳ್ತಂಗಡಿ ತಾಲ್ಲೂಕು ಪಟ್ರಮೆಗೆ ರಸ್ತೆ, ಸೇತುವೆಯನ್ನು ನಿರ್ಮಿಸುವುದು

ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ).—ಉಪಾಧ್ಯಕ್ಷರೇ, ಬೆಳ್ತಂಗಡಿ ತಾಲ್ಲೂಕು ಅನೇಕ ಕುಗ್ರಾಮಗಳಿಂದ ಕೂಡಿದ್ದು ಮಲೆನಾಡು ಹಾಗೂ ಹಿಂದುಳಿದ ಪ್ರದೇಶವಾಗಿದೆ. ಆದರಲ್ಲೂ ಡಿಸೆಂಬರ್ ತಿಂಗಳಲ್ಲಿ ಪ್ರಾರಂಭವಾದ ಮಂಗನ ಕಾಯಿಲೆ ಕುಗ್ರಾಮವಾದ 'ಪಟ್ರಮೆ'ಯಲ್ಲಿ ಉದಯವಾಣಿ ಪತ್ರಿಕೆಯವರು ಇದನ್ನು ಕುಗ್ರಾಮವೆಂದು ಗುರುತಿಸಿದ್ದಾರೆ. ಈ ಗ್ರಾಮದ ಸುತ್ತಲೂ ಅಂದರೆ ನಾಲ್ಕು ಕಡೆಗಳಿಂದಲೂ ಹೊಳೆಗಳು ಹರಿಯುತ್ತಿವೆ. ಈ ಗ್ರಾಮಕ್ಕೆ ರಸ್ತೆಗಳಿಲ್ಲ, ಹೊಳೆಗಳಿಗೆ ಸೇತುವೆಗಳಿಲ್ಲ, ವಿದ್ಯುತ್ ಇಲ್ಲ. ಆ ಗ್ರಾಮದ ಜನರಿಗೆ ಬೇಕಾದ ಪ್ರಾಥಮಿಕ ಅವಶ್ಯಕತೆಗಳು ಕೂಡ ಪೂರೈಕೆಯಾಗಿಲ್ಲ. ಯಾವ ಕಡೆಯಿಂದಲಾದರೂ ಒಂದು ಜೀಪಿನ ಸಂಪರ್ಕ ಪಡೆಯಬೇಕಿದ್ದರೆ ಸುಮಾರು ಹದಿನೈದು ಕಿಲೋ ಮೀಟರಿನಷ್ಟು ನಡೆದು ಬರಬೇಕು, ವಿದ್ಯಾರ್ಥಿಗಳು ವಿದ್ಯಾರ್ಜನೆಗಾಗಿ ಕನಿಷ್ಠ ೧೦ ಕಿಲೋ ಮೀಟರ್ ಬರಬೇಕಾಗಿದೆ. ''ಇದೊಂದು ದ್ವೀಪ'' ಆದರೆ ಒಂದು ವಿಶೇಷವೆಂದರೆ ಈ ದ್ವೀಪಕ್ಕೆ ಸುಮಾರು ೩೦ ವರ್ಷಗಳ ಹಿಂದೆ ರಸ್ತೆ ಮಾಡಲಾಗಿದೆ ಎಲ್ಲದೆ ಸೇತುವೆಗಳನ್ನು ನಿರ್ಮಿಸಲಾಗಿದೆ. ಆ ಸೇತುವೆಯನ್ನು ಆಗಿನ ಸಚಿವರೊಬ್ಬರು ಉದ್ಘಾಟನೆ ಮಾಡಿರುತ್ತಾರೆ ಎಂದು ಸರಕಾರಿ ದಾಖಲೆ ಪತ್ರಗಳಿವೆ. ಆಗದ ಊರಿಗೆ ಹೋಗದ ಚೇಟು' ಎಂಬ ಗಾದೆಯಂತಾಗಿದೆ. ಅಲ್ಲಿ ರಸ್ತೆ ಹಾಗೂ ಸೇತುವೆಗಳ ಯಾವುದೇ ಕುರುಹು ಸಮೇತ ಇಲ್ಲ. ಸುಮಾರು ೩೦ ವರ್ಷಗಳ ಹಿಂದೆ ರಸ್ತೆಗಳ ಹಾಗೂ ಸೇತುವೆಗಳನ್ನು ನುಂಗಿ ಕುಡಿಯುವಂತ ರಾಜಕಾರಣಿಗಳಿದ್ದಾರೆಂದಾಯಿತು.